ಚುಟುಕು ಸುದ್ದಿ

ವ್ಯಕ್ತಿ ನಾಪತ್ತೆ: ದೂರು

ರಾಮನಗರ: ತಾಲೂಕಿನ ಬಿಡದಿ ಹೋಬಳಿ ಇಟ್ಟಮಡು ತೊರೆದೊಡ್ಡಿ ಗ್ರಾಮದ ವಾಸಿ 61 ವರ್ಷದ ವೆಂಕಟಯ್ಯ ಕಾಣೆಯಾಗಿದ್ದಾರೆ. ಅ.8ರ ಮಂಗಳವಾರ ಬೆಳಗ್ಗೆ 4.30ರ ಸಮಯದಲ್ಲಿ ಸೊಪ್ಪು ಮಾರಾಟಕ್ಕಾಗಿ ಬೆಂಗಳೂರಿನ ಕೆ.ಆರ್. ಮಾರುಕಟ್ಟೆಗೆ ಹೋಗಿಬರುವುದಾಗಿ ಹೇಳಿ ಮನೆಯಿಂದ ಹೊರ ಹೋದವರು ವಾಪಸ್ ಬಂದಿರುವುದಿಲ್ಲ. ಎಲ್ಲಾ ಕಡೆ ಹುಡುಕಿದರೂ ಪತ್ತೆಯಾಗದ ಕಾರಣ ವೆಂಕಟಯ್ಯನ ಪುತ್ರಿ ರತ್ನಮ್ಮ ಬಿಡದಿ ಠಾಣೆಗೆ ಬಂದು ದೂರು ನೀಡಿರುತ್ತಾರೆ. ಈ ಸಂಬಂಧ ಕಲಾಸಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವ್ಯಕ್ತಿಯ ಬಗ್ಗೆ ತಿಳಿದುಬಂದಲ್ಲಿ ದೂರವಾಣಿ ಸಂಖ್ಯೆ 6971514868, 080272872237 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ವಿಜಯದಶಮಿ ಆಚರಣೆ

ರಾಮನಗರ: ವಿಜಯ ದಶಮಿಯ ಪ್ರಯುಕ್ತ ರಾಷ್ಟ್ರೀಯ ಸ್ವಯಂ ಸೇವಾ ಸಂಘ ರಾಮನಗರ ನಗರ ಹಾಗೂ ಗ್ರಾಮಾಂತರ ಮಂಡಲದ ವತಿಯಿಂದ ಪಥ ಸಂಚಲನ ಆಯೋಜಿಸಲಾಗಿತ್ತು. ನಗರದ ಎಂ.ಎಚ್. ಕಾಲೇಜು ಆವರಣದಿಂದ ಹೊರಟ ಪಥಸಂಚಲನ ನಗರದ ಮಾಗಡಿ ರಸ್ತೆ ಬಾಲಾಜಿ ಲೇಔಟ್, ಶಾಂತಿಲಾಲ್ ಲೇಔಟ್, ರಾಯರದೊಡ್ಡಿ ಸರ್ಕಲ್, ಶಿವಾಜಿನಗರ ಮೂಲಕ ವಿವೇಕಾನಂದನಗರದಲ್ಲಿನ ಸಂಘಮಿತ್ರ ಕಾರ್ಯಾಲಯದಲ್ಲಿ ತೆರೆಕಂಡಿತು. ಪಥಸಂಚಲನಕ್ಕು ಮುನ್ನ ನಡೆದ ಬೌದ್ಧಿಕ್‌ನಲ್ಲಿ ಮಾತನಾಡಿ, ಪ್ರಾಂತ ಸ್ವಾಮರಸ್ಯ ಸಂಯೋಜಕ ಕ.ಮು. ಲಕ್ಷ್ಮಿ ನಾರಾಯಣ್ ಈ ವರ್ಷದ ವಿಜಯದಶಮಿಗೆ ಸಂಘ ಸ್ಥಾಪನೆಯಾಗಿ ಶತಮಾನ ಪೂರೈಸಿ 101ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸಂಘಟನೆಯು ಎಲ್ಲಾ ಹಂತ ಹಾಗೂ ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ ಎಂದು ಹೇಳಿದರು. ಈ ವೇಳೆ ನಗರ ಸಂಘ ಚಾಲಕ ರಾಮು ಇದ್ದರು.

ಅರ್ಜಿ ಆಹ್ವಾನ

ರಾಮನಗರ: ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ವಿಭಾಗಿಯ ಮಟ್ಟದ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಹಾಗಾಗಿ ಶಿಕ್ಷಣ ಕ್ಷೇತ್ರದಲ್ಲಿ 10 ವರ್ಷ ಸೇವೆ ಸಲ್ಲಿಸಿರುವ ಶಿಕ್ಷಕರಿಂದ ವಿವಿಧ ವಿಭಾಗಗಳಲ್ಲಿ ಶಿಷ್ಯರು ಮೆಚ್ಚಿದ ಗುರು ಪ್ರಶಸ್ತಿಗೆ ಅರ್ಹ ಶಿಕ್ಷಕ ವೃಂದದಿಂದ ಅರ್ಜಿಯನ್ನು ಆಹ್ವಾನಿಸಲಾಗುತ್ತಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅ.18ರ ಶುಕ್ರವಾರದ ಒಳಗೆ ಅರ್ಜಿಯನ್ನು ಪೋಸ್ಟ್ ಮೂಲಕ ಅಥವಾ ನೇರವಾಗಿ ಸರಕಾರಿ ರಜೆಯನ್ನು ಹೊರತುಪಡಿಸಿ ಸಂಜೆ 05 ರಿಂದ 06 ಗಂಟೆ ಒಳಗೆ ನೇಗಿಲಯೋಗಿ ಕಚೇರಿ ,ಸೋಮೇಶ್ವರ ನಿಲಯ, ಬಿ .ಎಂ. ರಸ್ತೆ , ಎಸ್ಬಿಐ ಹಿಂಭಾಗ, ರಾಮನಗರ ಇಲ್ಲಿಗೆ ಸಲ್ಲಿಸಬಹುದಾಗಿದೆ ಹೆಚ್ಚಿನ ವಿವರಗಳಿಗೆ 9731318012, 9880246101, 9844405532 ಸಂಪರ್ಕಿಸಬಹುದಾಗಿದೆ.

ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಅಗತ್ಯ

ದೊಮ್ಮಸಂದ್ರ : ಪ್ರತಿಯೊಬ್ಬರಿಗೂ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವು ಸಹ ಬಹು ಮುಖ್ಯವಾಗಿದ್ದು, ಒತ್ತಡದ ಜೀವನಕ್ಕೆ ವಿರಾಮವನ್ನು ಇಡಬೇಕು ಎಂದು ಟ್ರೀಡಾ ಸಂಸ್ಥೆಯ ವ್ಯವಸ್ಥಾಪಕರಾದ ಡಾ.ಜಿ.ಲಿಂಗರಾಜು ಅವರು ತಿಳಿಸಿದರು. ತಾಲೂಕಿನ ಹೂಸ್ಕೂರು ಗ್ರಾಮದಲ್ಲಿ ಟ್ರೀಡಾ ಸಂಸ್ಥೆ ವತಿಯಿಂದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ಬಗ್ಗೆ ಜಾಗೃತಿ ಹಾಗೂ ಅರಿವು ಮೂಡಿಸುವ ಬೀದಿ ನಾಟಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಟ್ರೀಡಾ ಸಂಸ್ಥೆಯ ಎಸ್.ಜೆ ಪ್ರವಲಿಕ ಹಾಗೂ ಎಸ್.ಜೆ.ಇ.ಎಸ್ ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

ಮಾಂಸ ಖರೀದಿ ಜೋರು

ಹೊಸಕೋಟೆ: ನವರಾತ್ರಿ ಆಚರಿಸಿ ವಿಜಯದಶಮಿ ಮುಗಿದ ಮಾರನೆಯ ದಿನ ಮಾಂಸಾಹರ ಸೇವಿಸುವ ಪರಿಪಾಠವಿದ್ದು 11 ದಿನಗಳ ಕಾಲ ಮಾಂಸಾಹಾರ ತ್ಯಜಿಸಿ ಭಕ್ತಿಭಾವಗಳಿಂದ ನವರಾತ್ರಿ ಆಚರಿಸಿ ಎಲ್ಲಾ ಗ್ರಾಮಗಳಲ್ಲೂ ಕೂಡ ಗ್ರಾಮ ದೇವರುಗಳಿಗೆ ವಿಶೇಷ ಪೂಜೆಗಳನ್ನು ಸಲ್ಲಿಸಿ ಹನ್ನೊಂದನೆ ದಿನ ಮಾಂಸಹಾರ ಸೇವಿಸುವ ಹಿನ್ನೆಲೆ ನಗರದ ವಿವಿಧೆಡೆ ಮಾಂಸದಂಗಡಿಗಳಲ್ಲಿ ಬೆಳ್ಳಂಬೆಳಗ್ಗೆಯೇ ಕುರಿ, ಕೋಳಿ, ಮೀನು, ಮೊಟ್ಟೆ ಖರೀದಿಗೆ ಜನರು ಮುಗಿಬಿದ್ದಿದ್ದರು. ಮಾಂಸದ ದರವೂ ಕೂಡ ಎಂದಿಗಿಂತ ತುಸು ಹೆಚ್ಚಿದ್ದರೂ ಕೂಡ ಗ್ರಾಹಕರ ಖರೀದಿ ಜೋರಾಗಿತ್ತು.

■ ಅಸಂವಿಧಾನಿಕ ನಡೆ ಖಂಡಿಸಿ ಧರಣಿ ■ ನಿಷೇಧಾಜ್ಞೆ ವಾಪಸ್‌ಗೆ ಆಗ್ರಹ ■ 24ರ ನಂತರ ಉಗ್ರ ಪ್ರತಿಭಟನೆಗೆ ನಿರ್ಧಾರ

ರೈತರ ಬೇಡಿಕೆಗೆ ಡಿಸಿ ನಿರ್ಲಕ್ಷ್ಯ: ಪ್ರತಿಭಟನೆ

ಸಂ.ಕ.ಸಮಾಚಾರ, ರಾಮನಗರ

ನಗರದ ಐಜೂರು ವೃತ್ತದಲ್ಲಿ ಸೇರಿದ ಕಾರ್ಯಕರ್ತರು ಹಳೆಯ ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಮಾನವ ಸರಪಳಿ ರಚಿಸಿ ರಾಜ್ಯಸರ್ಕಾರ, ಜಿಲ್ಲಾ ಉಸ್ತುವಾರಿ, ಸಚಿವರು ಹಾಗೂ ಜಿಲ್ಲಾಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರತಿಭಟನೆಯಿಂದಾಗಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸುಮಾರು 40 ನಿಮಿಷಕ್ಕೂ ಹೆಚ್ಚು ಕಾಲ ವಾಹನ ಸಂಚಾರ ಅಸ್ತವ್ಯಸ್ಥಗೊಂಡಿತು. ದಸರಾ ಹಿನ್ನೆಲೆಯಲ್ಲಿ ಮೈಸೂರು ಕಡೆಗೆ ತೆರಳುತ್ತಿದ್ದ ಪ್ರಯಾಣಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ವೇಳೆ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ರೈತ ಸಂಘದ ವಿಭಾಗೀಯ ಉಪಾಧ್ಯಕ್ಷ ಕೆ.ಮಲ್ಲಯ್ಯ, ಕಳೆದ ತಿಂಗಳು ಪ್ರಮುಖವಾದ 28 ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದ್ದೆವು. ಆನಂತರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆಗಳಿಗೆ ಜಿಲ್ಲಾಧಿಕಾರಿಗಳು ನಿಷೇಧಾಜ್ಞೆ ಹೇರಿದ್ದಾರೆ. ಅಲ್ಲದೆ, ಪೊಲೀಸರ ಬಲ ಪ್ರಯೋಗಿಸಿ ಚಳವಳಿ ಹತ್ತಿಕ್ಕುವ ಮೂಲಕ ಜಿಲ್ಲಾಧಿಕಾರಿಗಳು ಉದ್ಧಟತ ಪ್ರದರ್ಶಿಸುತ್ತಿದ್ದಾರೆ ಎಂದು ಟೀಕಿಸಿದರು. ರೈತಸಂಘ ಸೇರಿದಂತೆ ವಿವಿಧ ಸಂಘಟನೆಗಳ 28 ಬೇಡಿಕೆಗಳು ಈಡೇರಿಸಲು ಸಾಧ್ಯವಾಗದ ಬೇಡಿಕೆಗಳೇನು ಅಲ್ಲ. ಒಂದು ಗಂಟೆಯೊಳಗೆ ಬಗೆಹರಿಸುವ ಬೇಡಿಕೆಗಳು

ಆಗಿವೆ. ಈಲ್ಲಾ ಉಸ್ತುವಾರಿ ಸಚಿವರು ನಿಷೇಧಾಜ್ಞೆ ಹಿಂಪಡೆಯುವ ಸಂಬಂಧ ಕಾಲಾವಕಾಶ ಪಡೆದಿದ್ದರು. ಸೌಜನ್ಯಕ್ಕಾದರು ಅವರು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸುವ ಕೆಲಸ ಮಾಡಿಲ್ಲ. ಅ.24ರಂದು ರಾಜ್ಯಸಮಿತಿ ಸಭೆ ನಡೆಯಲಿದ್ದು, ಅಲ್ಲಿ ರಾಜ್ಯಮಟ್ಟದ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಎಚ್ಚರಿಸಿದರು.

ರೈತಸಂಘ ಮಾಗಡಿ ತಾಲೂಕು ಅಧ್ಯಕ್ಷ ಹೊಸಪಾಳ್ಯ ಲೋಕೇಶ್ ಮಾತನಾಡಿ, ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತ ಮುಖಂಡರನ್ನು ಕರೆದು ಚರ್ಚಿಸುವ ಕನಿಷ್ಠ ಸೌಜನ್ಯ ಕೂಡ ಜಿಲ್ಲಾಧಿಕಾರಿಗಳಿಗೆ ಇಲ್ಲ. ನಾವೆಲ್ಲಿ ವಾಸಿಸುತ್ತಿದ್ದೇವೆ ಎಂಬ ಅನುಮಾನ ಕಾಡುತ್ತಿದೆ. ಉಪ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿ. ಇನ್ನಾದರು ಜಿಲ್ಲಾಧಿಕಾರಿಗಳು ತಮ್ಮ ತಪ್ಪನ್ನು ತಿದ್ದಿಕೊಳ್ಳದಿದ್ದರೆ ಈ ಜಿಲ್ಲೆಯಿಂದ ವರ್ಗಾವಣೆ ಆಗುವವರೆಗೂ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಚನ್ನಪಟ್ಟಣ ತಾಲೂಕು ಅಧ್ಯಕ್ಷ ರಾಮೇಗೌಡ ಮಾತನಾಡಿ, ಜಿಲ್ಲಾಧಿಕಾರಿಗಳ ಧೋರಣೆ ರೈತ ವಿರೋಧಿಯಾಗಿದೆ. ಕಂದಾಯ ಇಲಾಖೆ ಕಳ್ಳಕಾಕರ ಗೂಡಿನಂತಾಗಿದೆ. ಆಹಾರ ಇಲಾಖೆಯಲ್ಲಿಯೂ ಸಾವಿರಾರು ಕ್ವಿಂಟಾಲ್ ಅಕ್ಕಿ ಗುಳುಂ ಆಗಿದೆ. ಕಡತಗಳೇ ಮಾಯ ಆಗುತ್ತಿವೆ. ಈಗಾಗಲೇ ಅನೇಕ ಅಧಿಕಾರಿಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಇದೆಲ್ಲ ಮಾಹಿತಿ ಜಿಲ್ಲಾಧಿಕಾರಿಗಳಿಗೆ ಗೊತ್ತಿದ್ದರು ಮೌನ ವಹಿಸಿದ್ದಾರೆ ಎಂದು ಟೀಕಿಸಿದರು. ರೈತ ಸಂಘ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿ ಇಲ್ಲಿವರೆಗೆ ಜಿಲ್ಲಾಧಿಕಾರಿಗಳಾಗಿ ಬಂದವರೆಲ್ಲರು ಎಲ್ಲರೊಂದಿಗೆ ಬೆರೆತು ಉತ್ತಮವಾಗಿ ಕಾರ್ಯನಿರ್ವಹಿಸಿದ್ದರು. ಆದರೆ, ಈಗಿನ ಜಿಲ್ಲಾಧಿಕಾರಿಗಳು ಜನಸಾಮಾನ್ಯರು ಮತ್ತು ರೈತರಿಂದ ದೂರ ಉಳಿದು ಆಡಳಿತ ನಡೆಸುತ್ತಿದ್ದಾರೆ. ರೈತರ ಅಹವಾಲು ಆಲಿಸಲು ಕನಿಷ್ಠ ಸಭೆ ನಡೆಸುವ ಯೋಗ್ಯತೆ ಇಲ್ಲದ ಜಿಲ್ಲಾಧಿಕಾರಿಗಳು ಕಚೇರಿ ಬಾಗಿಲು ಹಾಕಿಕೊಳ್ಳಲಿ. ಅ.24ರ ನಂತರ ಉಗ್ರ ಪ್ರತಿಭಟನೆ ನಡೆಸಿ ಅವರನ್ನು ವಾಪಸ್ ಕಳುಹಿಸುವ ಕೆಲಸ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತಸಂಘ ರಾಜ್ಯ ಸಂಚಾಲಕ ಚೀಲೂರು ಮುನಿರಾಜು, ಜಿಲ್ಲಾ ಕಾರ್ಯದರ್ಶಿ ಶಿಲ್ಪಾ, ರಮ್ಯಾ, ಎಚ್.ಸಿ.ಕೃಷ್ಣಪ್ಪ, ಪುಟ್ಟಸ್ವಾಮಿ , ನಾಗರಾಜು, ಭಾಸ್ಕರ್ ಶಿವಣ್ಣ ಯಲಿಯೂರು, ರವಿ, ಸಿದ್ದರಾಜು, ಶಿವಲಿಂಗಯ್ಯ ಮತ್ತಿತರರು ಭಾಗವಹಿಸಿದ್ದರು.

ರೈತಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ನಗರದಲ್ಲಿ ಶನಿವಾರ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ಕಾಡೆಮ್ಮೆಗೆ ಗಾಯ: ಚಿಕಿತ್ಸೆ

ಆನೇಕಲ್: ಕಣ್ಣು ಕಾಣದಂತೆ ಗಾಯಗೊಂಡು ಆಹಾರ ಸೇವಿಸದೆ ನಿತ್ರಾಣಗೊಂಡು ಕಾಡಿನೊಳಗೆ ನರಳಾಡುತ್ತಿದ್ದ ಕಾಡೆಮ್ಮೆಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನದ ವೈದ್ಯ ಡಾ.ಕಿರಣ್ ಕುಮಾರ್ ನೇತೃತ್ವದ ತಂಡ ರಕ್ಷಿಸಿದೆ.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನದ ಸೀಗೆಕಟ್ಟೆ ಬಳಿ ಕಣ್ಣು ಕಾಣದೆ ಪರದಾಡುತ್ತಿರುವ ಸುದ್ದಿ ತಿಳಿಯುತ್ತಿದ್ದಂತೆಯೇ ಕಾಡಿನೊಳಗೆ ತೆರಳಿ ಅರಣ್ಯಾಧಿಕಾರಿಗಳು ಅರಿವಳಿಕೆ ನೀಡಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಕರೆತಂದು ಚಿಕಿತ್ಸೆ ನೀಡಿದ್ದಾರೆ.

ಚಿಕಿತ್ಸೆ ಬಳಿಕ ಕಾಡೆಮ್ಮೆ ಚೇತರಿಸಿಕೊಂಡರೆ ಕಾಡಿಗೆ ಬಿಡಲಾಗುವುದು ಸುಧಾರಿಸದೆ ಹೋದರೆ ಜೈವಿಕ ಉದ್ಯಾನದಲ್ಲಿರಿಸಿಕೊಂಡು ಚಿಕಿತ್ಸೆ ಮುಂದುವರೆಸಲಾಗುವುದು ಎಂದು ವೈದ್ಯ ಡಾ.ಕಿರಣ್ ಕುಮಾರ್ ಮಾಹಿತಿ ನೀಡಿದ್ದಾರೆ.

ತಂದೆಯನ್ನೇ ಕೊಂದ ಮಗ ಸೆರೆ

ಆನೇಕಲ್: ಕ್ಷುಲ್ಲಕ ಕಾರಣಕ್ಕೆ ಸ್ವತಃ ಮಗನೇ ಚಾಕುವಿನಿಂದ ಇರಿದು ತಂದೆಯನ್ನು ಕೊಲೆ ಮಾಡಿರುವ ಘಟನೆ ಬನ್ನೇರುಘಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ತಂದೆ–ಮಗ ಇಬ್ಬರೂ ಮೂಲತಃ ಕೇರಳದವರಾಗಿದ್ದು, ಬನ್ನೇರುಘಟ್ಟದ ಜನತಾ ಕಾಲೋನಿಯಲ್ಲಿ ವಾಸವಾಗಿದ್ದರು. ತಂದೆ ವೇಲಾಯುಧನ್ (76) ಕೊಲೆಯಾದ ದುರ್ದೈವಿ, ವಿನೋದ್ ಕುಮಾರ್ ಎಂಬಾತ ಕೊಲೆ ಮಾಡಿದ ಆರೋಪಿ ಮಗನಾಗಿದ್ದಾನೆ.

ಶನಿವಾರ ರಾತ್ರಿ ತಂದೆ, ಮಗ ಒಟ್ಟಿಗೆ ಕುಳಿತು ಮದ್ಯ ಸೇವಿಸಿದ್ದಾರೆ. ಈ ವೇಳೆ ಶುರುವಾದ ಜಗಳದಿಂದ, ಕೋಪಗೊಂಡ ಮಗ ಮನೆಯಲ್ಲಿದ್ದ ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ. ತೀವ್ರ ರಕ್ತಸ್ರಾವದಿಂದ ತಂದೆ ವೇಲಾಯುದನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಸ್ಥಳೀಯರಿಂದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಬನ್ನೇರುಘಟ್ಟ ಪೊಲೀಸರು, ಮೃತದೇಹವನ್ನು ಆನೇಕಲ್ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಿ, ಆರೋಪಿ ವಿನೋದನನ್ನು ವಶಕ್ಕೆ ಪಡೆದುಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದಸರಾ: ಬನ್ನಿ ವಿನಿಮಯ

ಹೊಸಕೋಟೆ: ನಗರದಲ್ಲಿ ವಿಜಯದಶಮಿ ಅಂಗವಾಗಿ ನಗರದ ಅವಿಮುಕ್ತೇಶ್ವರ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ನಗರದ ಪ್ರಮುಖ ರಸ್ತೆಗಳಲ್ಲಿ ವಿವಿಧ ಕಲಾತಂಡಗಳೊಂದಿಗೆ ಅದ್ಧೂರಿ ಮೆರವಣಿಗೆ ಮಾಡಲಾಯಿತು.

ರಾಷ್ಟ್ರೀಯ ಹೆದ್ದಾರಿ 75ರ ಗೌತಮ್ ಕಾಲೋನಿ ಸರ್ಕಲ್‌ನಲ್ಲಿ ಬನ್ನಿ ಮಂಟಪ ನಿರ್ಮಿಸಿ, ಖಡ್ಗ ಬಿಲ್ಲು ಬಾಣ ಬತ್ತಳಿಕೆಗಳನ್ನಿಟ್ಟು ಪೂಜಿಸಲಾಯಿತು. ಬಳಿಕ ಬನ್ನಿ ವೃಕ್ಷವನ್ನು ಕತ್ತರಿಸಿ ನೆರೆದಿದ್ದ ನಾಗರಿಕರು ಬಾಳು ಬಂಗಾರವಾಗಲಿ ಎಂದು, ಬನ್ನಿ ಪಡೆದು ಅವರವ ಮನೆಗಳಲಿಟ್ಟು ಪೂಜಿಸಿದರೆ ಐಶ್ವರ್ಯ ವೃದ್ಧಿಯಾಗುತ್ತದೆ ಎಂಬ ನಂಬಿಕೆಯಿಂದ 400 ವರ್ಷಗಳಿಂದ ನಡೆದುಕೊಂಡು ಬಂದ ಸಂಪ್ರದಾಯವನ್ನು ಶಾಸಕ ಶರತ್ ಬಚ್ಚೇಗೌಡರು ಚಾಲನೆ ನೀಡಿ ಮುಂದಿನ ಪೀಳಿಗೆಗೆ ವಿಜಯ ದಶಮಿ ಆಚರಣೆಯ ಮಹತ್ವ ತಿಳಿಸಿದರು.

ಈ ಸಂದರ್ಭದಲ್ಲಿ ಉದ್ಯಮಿಗಳಾದ ಬಿ ವಿ ಬೈರೇಗೌಡ, ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಕೇಶವ ಮೂರ್ತಿ, ಸದಸ್ಯರಾದ ಡಾ ಹೆಚ್ ಎಂ ಸುಬ್ಬರಾಜು, ಕೆ.ಸಿ,ಸುರೇಶ್ ಗೌಡ, ಅಟ್ರಾಸಿಟಿ ಸಮಿತಿ ಸದಸ್ಯ ಡಾ.ವಿಜಯ್ ಕುಮಾರ್, ಮಾಜಿ ಅಧ್ಯಕ್ಷ ಶಿವಾನಂದ್, ಕಮ್ಮವಾರಿ ಗೋಪಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಮಾರಮ್ಮ ದೇವಿಯ ಉತ್ಸವ

ಮಾಗಡಿ: ಮಾಗಡಿ–ಬೆಂಗಳೂರು ಮುಖ್ಯ ರಸ್ತೆಯ ತಾವರೆಕೆರೆಯ ಗ್ರಾಮ ದೇವತೆ ಮಾರಮ್ಮ ದೇವಿಯ ಅಂಬಾರಿ ಉತ್ಸವ ಅದ್ಧೂರಿಯಾಗಿ ನೆರವೇರಿತು.

14ನೇ ವರ್ಷದ ದಸರಾ ಮಹೋತ್ಸವವಾಗಿದ್ದು 9 ದಿನಗಳ ಕಾಲ ದೇವಿಗೆ ವಿವಿಧ ಅಲಂಕಾರ ಕುಂಕುಮ್ಮ ಅರ್ಚನೆ, ಭಕ್ತರಿಗೆ ಪ್ರಸಾದ ವಿನಿಯೋಗ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದ್ದು, 10ನೇ ದಿನ ವಿಜಯದಶಮಿ ಆಚರಣೆ ನಂತರ 11ನೇ ದಿನ ಗ್ರಾಮ ದೇವತೆ ಉತ್ಸವ ಮೂರ್ತಿಯನ್ನು ಕಂಚಿನ ಅಂಬಾರಿಯಲ್ಲಿ ಆನೆಯ ಮೇಲೆ ಕೂರಿಸಿ ಗ್ರಾಮಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೈಸೂರು ಅಂಬಾರಿ ಮಹೋತ್ಸವ ಮುಗಿದ ಮರುದಿನ ಇಲ್ಲಿ ಅಂಬಾರಿ ಉತ್ಸವ ನಡೆಯುವುದು ವಿಶೇಷ.

ಹಾವೇರಿ ಜಿಲ್ಲೆಯ ಐರಣಿ ಹೊಳೆಮಠದ ರಾಣಿ ಎಂಬ ಆನೆಯ ಮೇಲೆ ಗ್ರಾಮ ದೇವತೆ ಮಾರಮ್ಮ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆಯನ್ನು ಮಾಡಲಾಗಿದೆ ಎಂದು ದೇವಸ್ಥಾನದ ಅರ್ಚಕರಾದ ಕೃಷ್ಣಮೂರ್ತಿ, ನಾರಾಯಣ್ ತಿಳಿಸಿದ್ದಾರೆ.

ಅಂಬಾರಿ ಉತ್ಸವದ ಅಂಗವಾಗಿ ತಾವರೆಕೆರೆಯ ಪೆದ್ದನಪಾಳ್ಯ, ದೇವಮಾಚನಹಳ್ಳಿ, ಯಲಚಕುಪ್ಪೆ ಮಾರಮ್ಮ ದೇವಿ ಉತ್ಸವ ಮೂರ್ತಿ ಹಾಗೂ ಹಲಗಂಜಿನಹಳ್ಳಿ ರಾಮೇ ದೇವರ ಉತ್ಸವ ಮೂರ್ತಿಯನ್ನು ಬೆಳ್ಳಿಯ ಅಶ್ವರೂಢ ವಾಹನದಲ್ಲಿ ಅದ್ಧೂರಿ ಮೆರವಣಿಗೆ ಮಾಡಲಾಯಿತು 200 ಜೊತೆಗೂ ಹೆಚ್ಚು ಎತ್ತುಗಳಿಗೆ ಮತ್ತು ರಸುಗಳಿಗೆ ವಿಶೇಷ ಅಲಂಕಾರ ಮಾಡಿ ಗ್ರಾಮದಲ್ಲಿ ಮೆರವಣಿಗೆ ಭಾಗವಹಿಸಿದ್ದವು.

ಕಾರ್ಯಕ್ರಮದಲ್ಲಿ ದೇವಸ್ಥಾನದ ಪ್ರಮುಖರಾದ ಹನುಮಯ್ಯ, ಕಾಳಪ್ಪ, ಚಂದ್ರರಾಯಪ್ಪ, ಮೂಡಲಗಿರಿಯಪ್ಪ ಗ್ರಾಮದ ಮುಖಂಡರಾದ ಟಿ.ಜಿ. ನರಸಿಂಹಮೂರ್ತಿ, ಟಿ.ಎಲ್. ಕೆಂಪೇಗೌಡ, ಟಿ.ಸಿ.ಮಂಜುನಾಥ್, ಟಿ.ಎನ್. ಚಿಕ್ಕವೀರಯ್ಯ, ಆನಂದ್, ಗಂಗರಾಜು, ಲಕ್ಷ್ಮೀಕಾಂತ, ಚಂದ್ರಶೇಖರ್, ರಾಜು, ಗಂಗನರಸಯ್ಯ ಭಾಗವಹಿಸಿದ್ದರು.

ದೇಗುಲದಲ್ಲಿ ದಸರ